ಪಿಡಬ್ಲುಃ 1

ದಿನಾಂಕಃ 17-02-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಡಿ ಎಸ್ ಭಟ್ಟ ವಕೀಲರಿಂದಃ

ವಾದಿಯು ಕುಮಟಾ ತಾಲೂಕಿನ ಬಾಡದಲ್ಲಿ ವಾಸ್ತವ್ಯ ಇದ್ದಾರೆ. ಅಲ್ಲಿ ಅವರ ಕ್ಲಿನಿಕ್ ಇದೆ. ಅವರು ಯಾವುದೇ ರೋಗಿಗಳನ್ನು ಒಳರೋಗಿಯಾಗಿ ಚಿಕಿತ್ಸೆ ಕೊಡುವ ಆಸ್ಪತ್ರೆ ಹೊಂದಿಲ್ಲಾ ಎಂದರೆ ಸರಿ. ಅವರು ನಮ್ಮ ಕುಟುಂಬದವರು ಇರುತ್ತಾರೆ. ಅವರು ನನ್ನ ತಂದೆಯ ದೊಡ್ಡಮ್ಮನ ಮಗನಿರುತ್ತಾರೆ. ಅವರ ಎಲ್ಲಾ ಜಮೀನುಗಳನ್ನು ನಾವೇ ಸಾಗುವಳಿ ಮಾಡುತ್ತಿದ್ದೇವೆ. ಸದರಿ ಜಮೀನುಗಳನ್ನು ನಾನು ಯಾವುದೇ ಪ್ರತಿಪಲಾಪೇಕ್ಷೆ ಇಲ್ಲದೇ ಸಾಗವಳಿ ಮಾಡುತ್ತಾ ಉತ್ಪನ್ನವನ್ನೆಲ್ಲಾ ಅವರಿಗೆ ಕೊಡುತ್ತಾ ಬಂದಿದ್ದೇನೆ. ನಾನು ಅವರ ಜಮೀನುಗಳನ್ನು ಆಳುಗಳ ಮೂಲಕವೂ ಮಾಡಿಸುತ್ತೇನೆ ಮತ್ತು ನಾವು ಸ್ವತಃ ಮಾಡುತ್ತೇವೆ. ಸಾಗುವಳಿ ಖರ್ಚನ್ನು ಅವರು ನಮಗೆ ಕೊಡುತ್ತಾರೆ. ಅವರಿಗೆ ಸೇರಿದ ಒಟ್ಟು 1 ಮುಕ್ಕಾಲು ಎಕರೆ ಜಾಗವನ್ನು ನಾವು ಸಾಗುವಳಿ ಮಾಡುತ್ತಿದ್ದೇವೆ. ಆ ರೀತಿ 5 ಸರ್ವೆ ನಂಬರಗಳಲ್ಲಿ ಅವರ ಜಾಗ ಇರುತ್ತದೆ. ಈ ದಾವೆ ದಾಖಲಿಸುವ ಪೂರ್ವದಲ್ಲಿಯೇ ಅವರು ನನಗೆ ಮೊಕ್ತ್ಯಾರನಾಮೆ ಬರೆದುಕೊಟ್ಟಿದ್ದಾರೆ. ವಾದಿಗೆ ನ್ಯಾಯಾಲಯಕ್ಕೆ ಬರುವ ಸಮಯ ಮತ್ತು ಸಾಮರ್ಥ್ಯ ಇದ್ದರೂ ಸಹ ನಾನು 1 ರಿಂದ 3 ನೇ ಪ್ರತಿವಾದಿಯರ ಮೇಲಿನ ದ್ವೇಷದಿಂದ ಅವರ ನಜರಿಗೆ ಬರದಂತೆ ಈ ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲಾ. ನಮಗೆ ಮತ್ತು 6 ನೇ ಪ್ರತಿವಾದಿಯ ನಡುವೆ ಬೇರೆ ಬೇರೆ ಪ್ರಕರಣಗಳಲ್ಲಿ ದ್ವೇಷ ಇರುತ್ತದೆ ಎಂದರೆ ಒಂದೇ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು ಅದರಲ್ಲಿ ನಾವು ನಿರ್ದೋಷಿಗಳೆಂದು ಬಿಡುಗಡೆಯಾಗಿದ್ದೇವೆ. ವಾದಿಯ ತಂದೆ ವೆಂಕಟ್ರಮಣ ವೆಂಕಟ್ರಮಣ ಭಟ್ಟ ದಾವಾ ದಿನಾಂಕದಂದು ಮೃತಪಟ್ಟಿದ್ದಾರೆ ಎಂಬ ಬಗ್ಗೆ ನಾನು ಮರಣ ದಾಖಲೆಯನ್ನು ಹಾಜರಪಡಿಸಿದ್ದೇನೆ. ವಾದಿಯ ತಂದೆ ವೆಂಕಟ್ರಮಣ ವೆಂಕಟ್ರಮಣ ಭಟ್ಟ ಇವರ ಮರಣ ದಾಖಲೆ ನಿಪಿ 29 ರ ದಾಖಲೆಯಾಗಿದ್ದು, ನಿಪಿ 30 ರ ದಾಖಲೆ 1 ರಿಂದ 5 ನೇ ಪ್ರತಿವಾದಿಯರ ತಂದೆಯಾದ ವೆಂಕಟ್ರಮಣ ವೆಂಕಟ್ರಮಣ ಭಟ್ಟ ಇವರ ಮರಣ ದಾಖಲೆಯಾಗಿರುತ್ತದೆ. ನಾನು ಈ ದಾವಾ ದಾಖಲಿಸುವ ಪೂರ್ವದಲ್ಲಿ ನಮ್ಮ ವಕೀಲರಿಗೆ ಮಾಹಿತಿ ಕೊಡುವಾಗ ವಾದಿಯ ತಂದೆಯ ಮರಣ ದಾಖಲೆಯ ಪ್ರತಿಯನ್ನು ಕೊಟ್ಟಿದ್ದೆನು. ದಾವೆಯನ್ನು ತಯಾರಿಸಿದ ನಂತರ ಅದನ್ನು ನಾನು ಮತ್ತು ವಾದಿ ಸಂಪೂರ್ಣವಾಗಿ ಓದಿಕೊಂಡು ದಾಖಲಿಸಿದ್ದೇವೆ. ನಮ್ಮ ದಾವೆಯಲ್ಲಿ ವಾದಿಯ ತಂದೆಯ ಮರಣ ದಿನಾಂಕ 26-11-1985 ಎಂದು ದಾವಾ ಪ್ಯಾರಾ ನಂಬರ 2 ಮತ್ತು 4 ರಲ್ಲಿ ನಮೂದಾಗಿದೆ ಎಂದರೆ ಅದು ಕಣ್ತಪ್ಪಿನಿಂದ ಆಗಿದ್ದು ಅವರ ಮರಣ ದಿನಾಂಕ 25-10-1985 ಆಗಿರುತ್ತದೆ. ನಾನು ಮತ್ತು ವಾದಿ ದಾವೆಯನ್ನು ಓದುವ ವೇಳೆಯಲ್ಲಿ ನಮಗೆ ಆ ವಿಷಯ ಗಮನಕ್ಕೆ ಬಂದಿರಲಿಲ್ಲಾ ಈ ದಿನ ಗಮನಕ್ಕೆ ಬಂದಿರುತ್ತದೆ.

2. ದಾವೆಯನ್ನು ದಾಖಲಿಸುವ ಪೂರ್ವದಲ್ಲಿ 1 ರಿಂದ 6 ನೇ ಪ್ರತಿವಾದಿಯರ ತಂದೆ ವೆಂಕಟ್ರಮಣ ವೆಂಕಟ್ರಮಣ ಭಟ್ಟ ಇವರ ಮರಣ ದಾಖಲೆಯ ದೃಡೀಕೃತ ನಕಲನ್ನು ನಾನು ವಕೀಲರಿಗೆ ಕೊಟ್ಟಿದ್ದೆನು. ದಾವೆಯ ಪ್ಯಾರಾ ನಂಬರ 3 ಮತ್ತು 4 ರಲ್ಲಿ 1 ರಿಂದ 5 ನೇ ಪ್ರತಿವಾದಿಯರ ತಂದೆಯ ಮರಣ ದಿನಾಂಕ 27-7-1989 ಎಂದು ನಮೂದಿಸಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಬಗ್ಗೆ ತಮಗೆ ದ್ವಂಧ್ವ ಆಗಿದ್ದರಿಂದ ಆ ರೀತಿ ನಮೂದಾಗಿದೆ ಎಂದು ನುಡಿದಿರುತ್ತಾರೆ. ಆ ವಿಷಯ ಸಹ ದಾಖಲಿಸುವ ಕಾಲಕ್ಕೆ ಅಥವಾ ಆ ನಂತರದಲ್ಲಿ ನಮ್ಮ ನಜರಿಗೆ ಬಂದಿಲ್ಲಾ ಈ ದಿನ ಅದು ಮೊದಲ ಬಾರಿಗೆ ನನ್ನ ಗಮನಕ್ಕೆ ಬಂದಿರುತ್ತದೆ.

ಮುಂದುವರೆದ ಪಾಟೀ ಸವಾಲಿಗೆ ಶ್ರೀ ಡಿ ಎಸ್ ಭಟ್ಟ ವಕೀಲರು ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಕುಮಟಾ.